**Bangalore**
**Regional News**
**16.11.2025 / 2.30 pm**

ಆಕಾಶವಾಣಿ ಬೆಂಗಳೂರು
ಪ್ರದೇಶ ಸಮಾಚಾರ

<u>ಮುಖ್ಯಾಂಶಗಳು</u>

೧. ಬೆಳಗಾವಿ ಮೃಗಾಲಯದಲ್ಲಿ ಕೃಷ್ಣಮೃಗಗಳ ಸಾವಿನ ಸಂಖ್ಯೆ ೨೯ಕ್ಕೆ ಏರಿಕೆ; ಅರಣ್ಯಾಧಿಕಾರಿಗಳಿಂದ ಮುಂದುವರಿದ ಚಿಕಿತ್ಸೆ

೨. ಆರು ತಿಂಗಳಿನಿಂದ ಸಂಪೂರ್ಣ ಭರ್ತಿಯಾಗಿ ವಿಶಿಷ್ಟ ದಾಖಲೆ ಬರೆದ ಕೃಷ್ಣರಾಜ ಸಾಗರ ಅಣೆಕಟ್ಟು

೩. ಬೆಂಗಳೂರಿನ ಜಿಕೆವಿಕೆ ಕೃಷಿ ಮೇಳಕ್ಕೆ ಇಂದು ತೆರೆ; ಲಕ್ಷಾಂತರ ಮಂದಿ ಭಾಗಿ

೪. ಬೆಂಗಳೂರು ಕೇಂದ್ರ ನಗರ ಪಾಲಿಕೆ ವತಿಯಿಂದ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ

*****************

ಬೆಳಗಾವಿಯ ಕಿತ್ತೂರು ರಾಣಿ ಚೆನ್ನಮ್ಮ ಕಿರು ಮೃಗಾಲಯದಲ್ಲಿ ಗಳಲೆ ರೋಗದಿಂದಾಗಿ ಕಳೆದ ಮೂರು ದಿನಗಳಿಂದ ಸಾವನ್ನಪ್ಪಿರುವ ಕೃಷ್ಣಮೃಗಗಳ ಸಂಖ್ಯೆ ೨೯ಕ್ಕೆ ಏರಿದೆ. ಇಂದು ಮುಂಜಾನೆ ಮತ್ತೊಂದು ಕೃಷ್ಣಮೃಗ ಸಾವನ್ನಪ್ಪಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಇಂದು ಮುಂಜಾನೆ ಬೆಂಗಳೂರಿನಿಂದ ಆಗಮಿಸಿದ ತಜ್ಞ ವೈದ್ಯರ ತಂಡ ಮೃಗಾಲಯದಲ್ಲಿ ನಾಲ್ಕು ಕೃಷ್ಣ ಮೃಗಗಳ ಶವಪರೀಕ್ಷೆಗೆ ಒಳಪಡಿಸಿದ್ದಾರೆ. ವಾಯುಭಾರ ಕುಸಿತದಿಂದ ಉಂಟಾದ ಮಳೆ ಹಾಗೂ ಚಳಿ ಮತ್ತು ಉಷ್ಣತೆಯ ಪ್ರಮಾಣ ತೀರ ಕಡಿಮೆಯಾಗಿದ್ದರಿಂದ ಪ್ಯಾಕ್ಸರಲ್ ಮಲ್ಟೋಸಿರಾ ಸೋಂಕು ಹರಡಿ ಕೃಷ್ಣ ಮೃಗಗಳ ಸಾವು ಉಂಟಾಗಿದೆ ಎಂದು ಆಕಾಶವಾಣಿಗೆ ತಜ್ಞ ವೈದ್ಯರಾದ ಡಾ. ಚಂದ್ರಶೇಖರ್ ತಿಳಿಸಿದ್ದಾರೆ.

ಆರಂಭದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದರೂ ನಿಯಂತ್ರಣ ಸಾಧ್ಯವಾಗಿಲ್ಲ. ಇಂದು ಮುಂಜಾನೆ ಶವಪರೀಕ್ಷೆ ನಡೆಸಲಾಗಿದ್ದು, ಮಂಗಳವಾರ ವರದಿ ನೀಡಲಾಗುವುದು ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನಿಲ್ ಪನ್ವಾರ ತಿಳಿಸಿದ್ದಾರೆ. ಕೃಷ್ಣ

ಮೃಗಗಳನ್ನು ಪ್ರತ್ಯೇಕವಾಗಿರಿಸಿ ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ.

*****************

ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ ಅಣೆಕಟ್ಟೆ ಕಳೆದ ಆರು ತಿಂಗಳಿನಿಂದ ಸಂಪೂರ್ಣ ಭರ್ತಿಯಾಗಿ ವಿಶಿಷ್ಟ ದಾಖಲೆ ಬರೆದಿದೆ. ಈ ವರ್ಷ ಕಾವೇರಿ ಜಲಾನಯನ ಪ್ರದೇಶದಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಸುರಿದ ಪರಿಣಾಮ ಜೂನ್ ಆರಂಭದಲ್ಲಿಯೇ ಭರ್ತಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಅರ್ಪಿಸಿದ್ದರು. ತದನಂತರ ಸುರಿದ ಬಾರಿ ಮಳೆಗೆ ಕಳೆದ ಜೂನ್ ನಿಂದ ಈವರೆಗೆ ಮೂರು ಬಾರಿ ಅಪಾಯದ ಮಟ್ಟ ಮೀರಿ ಹರಿದಿದೆ. ೧೨೪.೮೦ ಅಡಿ ನೀರಿನ ಮಟ್ಟ ಹೊಂದಿರುವ ಅಣೆಕಟ್ಟೆ ಭರ್ತಿಯಾದ ಜೂನ್ ತಿಂಗಳಿನಿಂದ ಈವರೆಗೆ ೧೨೪ ಅಡಿ ಪ್ರಮಾಣದ ನೀರನ್ನು ಕಾಪಾಡಿಕೊಂಡು ಬಂದಿರುವುದು ವಿಶೇಷ. ಇದರ ಜೊತೆಗೆ ಮಂಡ್ಯ ಜಿಲ್ಲೆಯ ಕೃಷಿ ಬೆಳೆಗಳಿಗೆ ಸಮರ್ಪಕ ನೀರು ಒದಗಿಸಿದ್ದು, ನಾಲೆ, ಕೆರೆಗಳನ್ನು ಸಹ ಭರ್ತಿ ಮಾಡಲಾಗಿದೆ. ಇಡೀ ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಲಾಗಿದೆ. ತಮಿಳುನಾಡಿಗೆ ನೀಡಬೇಕಾದ ನೀರಿನ ಪ್ರಮಾಣಕ್ಕಿಂತ ಹೆಚ್ಚು ನೀರು ಬಿಡಲಾಗಿದೆ. ಆದರೂ ಕೆ.ಆರ್.ಎಸ್. ಆಣೆಕಟ್ಟು ಇನ್ನು ಭರ್ತಿಯಾಗಿಯೇ ಇರುವುದು ದಾಖಲೆಯಾಗಿದೆ.

*****************

ಕಳೆದ ಮೂರು ದಿನಗಳಿಂದ ಬೆಂಗಳೂರಿನ ಹೆಬ್ಬಾಳದ ಜಿ.ಕೆ.ವಿ.ಕೆ. ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಇಂದು ತೆರೆ ಬೀಳಲಿದೆ. ಈ ಬಾರಿ ಮೇಳದಲ್ಲಿ ೫೦ ಲಕ್ಷ ರೂಪಾಯಿ ಬೆಲೆ ಬಾಳುವ ಜಾಫರಬಾದಿ ಕೋಣ ವಿಶೇಷ ಆಕರ್ಷಣೆಯಾಗಿದೆ. ಕೃಷಿ ಮೇಳವು ಕೃಷಿ ಉತ್ಪನ್ನಗಳ ಜೊತೆಗೆ ಕೃಷಿಯ ಅರಿವನ್ನು ಹಂಚುತ್ತಿದೆ. ನಾನಾ ಬಗೆಯ ಕೃಷಿ ಬೆಳೆ ಉತ್ಪನ್ನಗಳನ್ನು ಪರಿಚಯಿಸುತ್ತಿದೆ. ನವಂಬರ್ ೧೩ ರಂದು ಆರಂಭವಾದ ಮೇಳದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಜನರು ಭಾಗಿಯಾಗಿದ್ದಾರೆ. ಮೇಳದಲ್ಲಿ ಧಾರವಾಡ, ರಾಯಚೂರು, ಶಿವಮೊಗ್ಗ, ಬಾಗಲಕೋಟೆ ಕೃಷಿ ವಿದ್ಯಾಲಯಗಳು ಮಳಿಗೆಗಳನ್ನು ತೆರೆದಿವೆ. ಈ ಬಾರಿ ಹಸಿ ಅವರೆಕಾಯಿ, ಹೆಸರುಕಾಳು, ತೊಗರಿಕಾಯಿ, ಹಲಸಂದೆ, ಬಟಾಣಿ ಇತ್ಯಾದಿ ಧಾನ್ಯಗಳನ್ನು ಬಿಡಿಸುವ ಯಂತ್ರಗಳನ್ನು ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯ ಆವಿಷ್ಕರಿಸಿದ್ದು ಗಮನ ಸೆಳೆಯುತ್ತಿದೆ.

*****************

ಯುವ ಜನರು ದೇಶದ ಏಕತೆ, ಐಕ್ಯತೆ ಮತ್ತು ಘನತೆಯನ್ನು ಎತ್ತಿ ಹಿಡಿಯುವ ಮೂಲಕ ಭಾರತ ವಿಶ್ವದ ಹಿರಿಯಣ್ಣ ನಾಗಬೇಕೆಂಬ ಕನಸನ್ನು ನನಸಾಗಿಸಬೇಕು ಎಂದು ಚಿತ್ರದುರ್ಗ ಲೋಕಸಭಾ ಸದಸ್ಯ ಗೋವಿಂದ ಕಾರಜೋಳ  ಕರೆ ನೀಡಿದ್ದಾರೆ. ದಾವಣಗೆರೆಯಲ್ಲಿಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ೧೫೦ನೇ ಜನ್ಮ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಏಕತಾ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಪಟೇಲ್ ಅವರ ಕನಸುಗಳನ್ನು ಸಾಕಾರಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದ್ದಾರೆ.

*****************

ಬೆಂಗಳೂರು ಕೇಂದ್ರ ನಗರಪಾಲಿಕೆಯ ವತಿಯಿಂದ ಪೌರಕಾರ್ಮಿಕರಿಗೆ, ಆಟೋ ಟಿಪ್ಪರ್ ಚಾಲಕರಿಗೆ ಹಾಗೂ ಲೋಡರ್ ಗಳ ಅರೋಗ್ಯ ತಪಾಸಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ೪೫ ನಮ್ಮ ಕ್ಲಿನಿಕ್ ಗಳಲ್ಲಿ ಹಾಗೂ ೨೮ ನಗರ ಪ್ರಾಥಮಿಕ ಅರೋಗ್ಯ ಕೇಂದ್ರಗಳಲ್ಲಿ ಒಟ್ಟು ೭೩ ಸ್ಥಳಗಳಲ್ಲಿ ಅರೋಗ್ಯ ತಪಾಸಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದ್ದಾರೆ. ನಗರ ನೈರ್ಮಲ್ಯ ಕಾಪಾಡುವವರ ಆರೋಗ್ಯ ಕಾಪಾಡುವುದು ಆದ್ಯ  ಕರ್ತವ್ಯವಾಗಿದ್ದು, ಎಲ್ಲಾ ಸ್ವಚ್ಛತಾ ಸಿಬ್ಬಂದಿಗಳಿಗೆ ಅರೋಗ್ಯ ತಪಾಸಣೆ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

*****************

ರೈಲು ಪ್ರಯಾಣಿಕರು ರೈಲು ನಿಲ್ದಾಣಗಳ ಸ್ಟಾಲ್‌ಗಳಲ್ಲಿ ಆಹಾರ ಮತ್ತು ಇತರ ವಸ್ತುಗಳನ್ನು ಖರೀದಿಸಿದಾಗ ಡಿಜಿಟಲ್ ವಿಧಾನದ ಮೂಲಕ ಪಾವತಿಸಬೇಕೆಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗವು ಮನವಿ ಮಾಡಿದೆ. ಡಿಜಿಟಲ್ ಪಾವತಿಯು ಅತ್ಯಂತ ಸುಲಭ, ತ್ವರಿತ ಮತ್ತು ಪಾರದರ್ಶಕ ಪಾವತಿ ವಿಧಾನವಾಗಿದ್ದು, ಚಿಲ್ಲರೆಯ ಜಂಜಾಟವಿಲ್ಲದೆ, ಸರಿಯಾದ ಮೊತ್ತ ಪಾವತಿಸಲು ಪ್ರಯಾಣಿಕರು ಡಿಜಿಟಲ್ ಪಾವತಿ ವಿಧಾನವನ್ನು ಬಳಸುವಂತೆ ನೈರುತ್ಯ ರೈಲ್ವೆ, ಬೆಂಗಳೂರು ವಿಭಾಗದ ಸಾರ್ವಜನಿಕ ಸಂಪರ್ಕ ಅಧಿಕಾರಿ ಪ್ರಾಣೇಶ್ ಕೆ.ಎನ್ ತಿಳಿಸಿದ್ದಾರೆ.

*****************

ಕಲಬುರ್ಗಿಯ ಚಿತ್ತಾಪುರದಲ್ಲಿ ಇಂದು ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಪಥಸಂಚಲನ ಬಿಗಿ ಬಂದೋಬಸ್ತ್‌ನಲ್ಲಿ ನಡೆಯಲಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಸಾವಿರದ ೨೦೦ ಕ್ಕೂ ಹೆಚ್ಚು ಪೊಲೀಸರನ್ನು ನೇಮಿಸಲಾಗಿದೆ. ಹಲವು ಷರತ್ತುಗಳ ನಡುವೆ ಇಂದು ಮಧ್ಯಾಹ್ನ ೩ರಿಂದ ಸಂಜೆ ೫.೩೦ರ ಅವಧಿಯವರೆಗೆ ಪಥ ಸಂಚಲನ ನಡೆಯಲಿದೆ. ೩೫೦ ಮಂದಿ ಗಣವೇಷಧಾರಿಗಳು ಪಥಸಂಚಲನದಲ್ಲಿ ಭಾಗಿಯಾಗಲಿದ್ದಾರೆ. ಚಿತ್ತಾಪುರದ ಬಜಾಜ್ ಕಲ್ಯಾಣ ಮಂಟಪದ ಬಳಿಯಲ್ಲಿ ಶಂಖನಾದ ಮಾಡುವ ಮೂಲಕ ಪಥ ಸಂಚಲನ ಆರಂಭಿಸಲು ಉದ್ದೇಶಿಸಲಾಗಿದೆ. ಪುರಸಭೆಯಿಂದ ೧೨ ಮತ್ತು ಪೊಲೀಸ್ ಇಲಾಖೆಯಿಂದ ೪೪ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಪಥ ಸಂಚಲನ ಮಾರ್ಗದಲ್ಲಿ ೧೦ ಡ್ರೋನ್ ಕ್ಯಾಮೆರ ಅಳವಡಿಕೆ ಮಾಡಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಲು ಮಾಹಿತಿ ನೀಡಿದ್ದಾರೆ.

*****************

ಐತಿಹಾಸಿಕ ಧಾರ್ಮಿಕ ಕ್ಷೇತ್ರ ಮಂಡ್ಯ ಜಿಲ್ಲೆ ಮೇಲುಕೋಟೆ ದೇವಾಲಯದ ಆವರಣದಲ್ಲಿ ಮಂಗಗಳ ಹಾವಳಿ ಹೆಚ್ಚಾಗಿರುವುದರಿಂದ ನೂರಕ್ಕೂ ಹೆಚ್ಚು ಕೋತಿಗಳನ್ನು ಹಿಡಿದು ಅರಣ್ಯಕ್ಕೆ ಬಿಡಲಾಗಿದೆ. ಮೇಲುಕೋಟೆಯ ಚಲುವನಾರಾಯಣಸ್ವಾಮಿ, ಯೋಗ ನರಸಿಂಹ ಸ್ವಾಮಿ ದೇವಾಲಯದ ಆವರಣ, ಕಲ್ಯಾಣಿ, ಧನುಷ್ಕೋಟಿ ಸೇರಿದಂತೆ ಹಲವೆಡೆ ಭಕ್ತರಿಗೆ ಕೋತಿಗಳು ತೊಂದರೆ ನೀಡುತ್ತಿದ್ದವು. ದೇವಾಲಯದ ಆಡಳಿತ ಮಂಡಳಿ, ಅರಣ್ಯ ಇಲಾಖೆ ಹಾಗೂ ಮೇಲುಕೋಟೆ ಗ್ರಾಮ ಪಂಚಾಯ್ತಿ ಸಹಕಾರದಲ್ಲಿ ನೂರಕ್ಕೂ ವಾನರ ಸೇನೆಯನ್ನು ಹಿಡಿದು ಅರಣ್ಯಕ್ಕೆ ರವಾನಿಸಲಾಗಿದೆ ಎಂದು ದೇವಾಲಯದ ಆಡಳಿತ ಮಂಡಳಿ ತಿಳಿಸಿದೆ.

*****************

ಹೆಚ್.ಎ.ಎಲ್. ಮೂರನೇ ಹಂತದ ಹಿರಿಯ ಹಾಗೂ ಕಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ವೇದಿಕೆಯಿಂದ ಇಂದು ಬೆಂಗಳೂರಿನಲ್ಲಿ ೭೦ನೇ ಕನ್ನಡ ರಾಜ್ಯೋತ್ಸವ ಆಯೋಜಿಸಲಾಗಿದೆ. ವಿಶೇಷ ಆಹ್ವಾನಿತರಾಗಿ ದೂರದರ್ಶನದ ನಿವೃತ್ತ ಅಧಿಕಾರಿ ಡಾ.ಬಾನಂದೂರು ಕೆಂಪಯ್ಯ ಭಾಗವಹಿಸಲಿದ್ದಾರೆ.

*****************

ಹುಬ್ಬಳ್ಳಿಯಲ್ಲಿ ಕರ್ನಾಟಕ ಮತ್ತು ಚಂಡೀಗಡ ತಂಡಗಳ ನಡುವೆ ರಣಜಿ ಪಂದ್ಯ ನಡೆಯುತ್ತಿದೆ. ಇತ್ತೀಚಿನ ವರದಿ ಬಂದಾಗ ಕರ್ನಾಟಕ ೩ ವಿಕೆಟ್ ನಷ್ಟಕ್ಕೆ ೧೨೯ ರನ್ ಗಳಿಸಿ ಆಡುತ್ತಿದೆ. ಕರುಣ್ ನಾಯರ್ ೭೩ ರನ್ ಹಾಗೂ ಸ್ಮರಣ್ ರವಿಚಂದ್ರನ್ ೩೨ ರನ್ ಗಳಿಸಿ ಆಡುತ್ತಿದ್ದಾರೆ. ನಾಯಕ ಮಯಾಂಕ್ ಅಗರ್‌ವಾಲ್ ೯ ರನ್ ಗಳಿಸಿ ಔಟಾಗಿದ್ದಾರೆ.

*****************